# ಕಾರುಣ್ಯ ಮೂರುತಿಯೆ ಕಂಗಳು ಮೂರುಳ್ಳ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 06.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 417.
3. **Note:** Lyrics in these references are same and the singer has followed these wordings.

ರಾಗ: ಮುಖಾರಿ ತಾಳ: ಆದಿ

ಕಾರುಣ್ಯ ಮೂರುತಿಯೆ ಕಂಗಳು ಮೂರುಳ್ಳ ದೊರೆಯೆ ॥ ಪ ॥
ಧಾರುಣಿಯೊಳು ನಿಮಗೆಣೆಯ ಗುರು ದೇವ ಶಿಖಾಮಣಿಯೇ ॥ ಅಪ ॥

ಗುಹಾಸುರ ಮರ್ದನನೆ ದೇವ ಖಗ ವೃಷ-ವಾಹನನೆ
ಗಜ-ಚರ್ಮ ಪೀತಾಂಬರನೆ ಮಹಾದೇವ ಮಾಧವನೆ ॥ ೧ ॥

ತ್ರಿಪುರಾವಳಿ ಸಂಹಾರನೆ ತ್ರೈಲೋಕ ಪಾವನನೆ
ಅಪಾರ ಮಹಿಮನೆ ಪ್ರಸನ್ನ ಶ್ರೀ ಹರಿಹರನೆ ॥ ೨ ॥

ತುಂಗಭದ್ರಾ ದಡಿಯ ತಾಳಿಪ ಗಂಗೆಯ ಜಡೆಯ (ತಾಳಿಪ್ಪ)
ಪುರಂದರ ವಿಠ್ಠಲನ ಪ್ರಿಯ ನೀ ಸಲಹಯ್ಯಾ ಎನ್ನೊಡೆಯ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ**:

**ಕಾರುಣ್ಯ ಮೂರುತಿಯೆ** – ಹರಿಯನ್ನು ಸೂಚಿಸುತ್ತದೆ.

**ಕಂಗಳು ಮೂರುಳ್ಳ ದೊರೆಯೆ** – ಹರ.

**ಖಗ ವೃಷ ವಾಹನನೆ** – ಹರಿಯ ವಾಹನ ಗರುಡ (ಖಗ) ಮತ್ತು ಹರನ ವಾಹನ ಬಸವ (ವೃಷ).

**ಗಜಚರ್ಮ ಪೀತಾಂಬರನೆ** – ಹರನ ಉಡುಗೆ ಗಜಚರ್ಮ; ಹರಿಯದು ಪೀತಾಂಬರ.

**ತ್ರಿಪುರಾವಳಿ ಸಂಹಾರನೆ** – ತ್ರಿಪುರಗಳನ್ನು ನಾಶಮಾಡಿದ ಹರ.

**ತ್ರೈಲೋಕ್ಯ ಪಾವನೆ** – ತನ್ನ ಪಾದಗಳಿಂದ ಗಂಗೆಯನ್ನು ಒದಗಿಸಿ, ಮೂರು ಲೋಕಗಳನ್ನು ಪಾವನಗೊಳಿಸಿದವನು ಹರಿ.

**Classification:** Keerthane
**Ankita:** purandara vittala
**Location:** NA
**Category:** Shiva Stuti
**Sub-Category:** Shiva, kannu, bhumi, garuda, loka, Madhava, Prasanna, nadi, gange,
**Pravachana:** NA
**Explanation:** NA